**ದಿನಾಂಕ: 26.03.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲು: ಪ್ರತಿ ವಾದಿ ಪರ ವಕೀಲರಿಂದ:**

1. ಓ ಎಸ್ ಸಂಖ್ಯೆ 600/21 ಯಾರು ಯಾರ ವಿರುದ್ದ ಹಾಕಿರುತ್ತಾರೆಂದು ನಾನು ತಿಳಿದುಕೊಂಡಿರುವುದಿಲ್ಲ. ಅದರಲ್ಲಿ ಏನು ಪರಿಹಾರ ಕೋರಲಾಗಿದೆ ಎಂದು ನನಗೆ ಗೊತ್ತಿಲ್ಲ. ಅದರಲ್ಲಿ ವಾದಿ ನನ್ನ ಅಣ್ಣನ ಮಗ. ಸದರಿ ದಾವೆಯಲ್ಲಿ 3ನೇ ದಾವಾ ಸ್ವತ್ತು ಸರ್ವೆ ನಂ.241, 1 ಎಕರೆ 35 ಗುಂಟೆ ಇದು ನನಗೆ ಸೇರಿದ ಸ್ವತ್ತು ಎಂದರೆ ಸಾಕ್ಷಿಯು ಅದರಲ್ಲಿ 2 ಎಕರೆ ನನಗೆ ಸೇರುತ್ತದೆಂದು ನುಡಿಯುತ್ತಾರೆ. ಸದರಿ ದಾವೆಯಲ್ಲಿ ದಾವಾ ಐಟಂ 4 ಸರ್ವೆ ನಂ.242, 1 ಎಕರೆ 32 ಗುಂಟೆ ಜಾಗ ದೇವರಾಜನಾಯ್ಕ ರವರಿಗೆ ಸೇರಿರುತ್ತದೆಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.241 ನನ್ನ ಪಾಲಿಗೆ ಬಂದಿದ್ದು ಅದರಂತೆ ನಾನು ಮಾರಾಟ ಮಾಡಲು ಸಹ ಪ್ರಯತ್ನ ಮಾಡಿರುತ್ತೇನೆಂದರೆ ಸರಿಯಲ್ಲ. ಪ್ರಸ್ತುತ ದಾವೆ ಚಾಲ್ತಿಯಲ್ಲಿರುವ ಸಂದರ್ಭದಲ್ಲಿ ನಾಗರಾಜನಾಯ್ಕ ರವರ ಜೊತೆ ಶಾಮೀಲಾಗಿ ನಾನು ಓ ಎಸ್ 600/21 ಸುಳ್ಳು ದಾವೆ ಹಾಕಿರುತ್ತೇನೆಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನನ್ನ ವಿರುದ್ದ ದಾವೆ ಹಾಕಲಾಗಿದೆ ಎಂದು ನುಡಿಯುತ್ತಾರೆ. ಪ್ರಸ್ತುತ ದಾವಾ ಸ್ವತ್ತು ಸಂಪೂರ್ಣ ವಿಸ್ತೀರ್ಣ ವಾದಿಗೆ ಸೇರಿರುತ್ತದೆಂದರೆ ಸುಳ್ಳು. ನನಗೂ ಹಾಗೂ ನಾಗರಾಜನಾಯ್ಕ ರವರಿಗೆ ದಾವಾ ಸ್ವತ್ತಿನಲ್ಲಿ ಯಾವುದೇ ಹಕ್ಕಿಲ್ಲ ಎಂದರೆ ಸರಿಯಲ್ಲ. ಕೇವಲ ಅಕ್ರಮವಾಗಿ ದಾವಾ ಸ್ವತ್ತನ್ನು ಪಡೆದುಕೊಳ್ಳುವ ಉದ್ದೇಶದಿಂದ ಈ ರೀತಿ ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆ: ಇರುವುದಿಲ್ಲ**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓದಿ, ಹೇಳಿ, ಕೇಳಿ ಸರಿ ಇದೆ.

**ಅಪರ ಸಿಜೆ ಮತ್ತು ಜೆ.ಎಂ.ಎಫ್.ಸಿ.,**
**ಕನಕಪುರ.**